ದಬ್ಬಿದರು. ಅಷ್ಟರಲ್ಲಿ ಹತ್ತಿರದಲ್ಲೇ ಇದ್ದ ವ್ಯಾಪಾರಸ್ಥನೊಬ್ಬ ಓಡಿಬಂದು ಕೂಗಿಕೊಂಡಿದ್ದರಿಂದ ಈ ಹುಡುಗಿಯನ್ನು ಕಾರಿನಿಂದ ಹೊರಗಡೆಗೆ ದಬ್ಬಿ ಹೊರಟು ಹೋದರೆಂದು ತಿಳಿದು ಬಂದಿದೆ. ಈ ಹುಡುಗಿ ಮಧ್ಯಾಹ್ನ ಯಶವಂತಪುರದ ಪೋಲೀಸ್ ಠಾಣೆಗೆ ದೂರು ಕೊಡಲು ಹೋದಾಗ ದೂರನ್ನು ರಿಜಿಸ್ಟರ್ ಮಾಡಲು ಪೋಲೀಸ್ ಅಧಿಕಾರಿಗಳು ನಿರಾಕರಿಸಿದರೆಂದು ಗೊತ್ತಾಗಿದೆ. ಅಲ್ಲದೆ ಆ ಹುಡುಗಿಯನ್ನು ಹೂಡೆದರೆಂದೂ, ಸುಳ್ಳು ಹೇಳುತ್ತಿದ್ದೀಯ ಎಂದು ಬೆದರಿಸಿ ಕಳುಹಿಸಿದ್ದಾರೆ. ಶಬನಾ ಘಾತಿಮಾನನ್ನು ಕೇಳಲಾಗಿ ಕಾರಿನಲ್ಲಿ ಇನ್ನೂ ಇಬ್ಬರು ಮಕ್ಕಳಿದ್ದರೆಂದೂ ಅವರ ಬಾಯಿಯನ್ನು ಕಟ್ಟಲಾಗಿತ್ತೆಂದೂ ಹೇಳಿದ್ದಾಳೆ.

ಇನ್ನೊಂದು ಇದೇ ರೀತಿಯ ದೂರು ಮಲ್ಲೇಶ್ವರದ ಪ್ಲಾಟ್‌ಫಾರಂ ರಸ್ತೆಯಲ್ಲಿರುವ ಜಕ್ಕರಾಯನ ಕೆರೆಯ ಅಂಗಳದಲ್ಲಿನ ನಿವಾಸಿಗಳಿಂದ ಬಂದಿದೆ. ಇಬ್ಬರು ಮಕ್ಕಳನ್ನು ನಿನ್ನೆ ಸಂಜೆ ಅಪಹರಣ ಮಾಡಿರುವುದಾಗಿಯೂ ಅದರ ಬಗ್ಗೆ ಯಾರೂ ಕೇಳದಂತಾಗಿದೆಯೆಂದೂ ಅಲ್ಲಿನ ಬಡಜನತೆ ಗೋಳಿಡುತ್ತಿದ್ದಾರೆ.

ಮಲ್ಲೇಶ್ವರ, ರಾಜಾಜಿನಗರ ಮತ್ತಿತರ ಕಡೆಗಳಲ್ಲಿ ಇದರಿಂದ ಜನ ದಿಗ್ಭ್ರಾಂತರಾಗಿದ್ದಾರೆ, ಹೆದರಿದ್ದಾರೆ.

ಆದ್ದರಿಂದಲೇ ಈ ಎರಡು ವಿಷಯಗಳ ಬಗ್ಗೆ ಗೃಹ ಸಚಿವರು ಹೇಳಿಕೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

೧) ಯಶವಂತಪುರದ ಘಟನೆಯ ಬಗ್ಗೆ ವಿವರ ಮತ್ತು ಕೈಗೊಂಡ ಕ್ರಮ.

೨) ಮಕ್ಕಳು ಅಪಹರಣವಾಗುತ್ತಿದ್ದಾರೆಂಬ ಬಲವಾದ ವದಂತಿ ಮತ್ತು ಸರ್ಕಾರದ ಪೋಲೀಸ್ ಇಲಾಖೆಯ ನಿಷ್ಕ್ರಿಯೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು) —ಈ ವಿಚಾರವನ್ನು ಗೃಹ ಸಚಿವರ ಗಮನಕ್ಕೆ ತಂದು ಮುಂದಿನ ಸಭೆಯಲ್ಲಿ ಉತ್ತರ ಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ವಂಡ್ಯ ಪ್ರಥಮ ಸರ್ಕಲ್ ವಾಣಿಜ್ಯ ಅಧಿಕಾರಿ ಶ್ರೀ ವೆಂಕಟೇಶ್ ಎಂಬುವರು ಒಂದು ಸಾವಿರ ರೂಪಾಯಿಗಳ ಲಂಚ ಪಡೆಯುತ್ತಿದಾಗ ಲಂಚ ನಿರೋಧ ಅಧಿಕಾರಿಗಳಿಂದ ಹಿಡಿಯಲ್ಪಟ್ಟಿದ್ದರೂ ಈವರೆಗೆ ಸದರಿ ಅಧಿಕಾರಿಯನ್ನು ಅಮಾನತ್ತುಗೊಳಿಸಿಲ್ಲ ಹಾಗೂ ಆ ಅಧಿಕಾರಿಯ ಮೇಲೆ ಯಾವ ಕ್ರಮ ವನ್ನೂ ಕೈಗೊಂಡಿಲ್ಲ. ಈ ಅಧಿಕಾರಿಗೆ ಪ್ರಭಾವ ರಾಜಕಾರಣಿಗಳ ಮತ್ತು ಅಧಿಕಾರಿಗಳ ಕೈವಾಡ ಇದೆಯೆಂದು ತೋರುತ್ತದೆ. ನಾನು ಈ ಬಗ್ಗೆ ೧೯-೮-೮೫ ರಂದು ಒಂದು ಚುಕ್ಕೆ ಗುರುತಿನ ಪ್ರಶ್ನೆ ಕಳುಹಿಸಿದ್ದರೂ ಸಹ ೧೪-೮-೮೫ರ ನಂತರ ಕಳುಹಿಸಲಾದ ಪ್ರಶ್ನೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಉತ್ತರ ಬಂದಿದೆ. ಇದನ್ನು ನೋಡಿದರೆ ಇದೂ ಸಹ ರಾಜಕಾರಣದ ಕೈವಾಡ ತೋರುತ್ತದೆ. ಇಂತಹ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಸದನದ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು.—ಇಲ್ಲಿ ರಾಜಕಾರಣ ಯಾರೂ ಮಾಡುವುದಿಲ್ಲ. ಕೆಲವು ಪ್ರಶ್ನೆಗಳನ್ನು ರಿಜೆಕ್ಟ್ ಮಾಡುವುದಕ್ಕೆ ಪ್ರಾವಿಷನ್ ಇರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಹೇಳಲ್ಲ ಅವರು ಹೇಳಿದ್ದು.

ಅಧ್ಯಕ್ಷರು.—'ದುಷ್ಟ ಶಿಕ್ಷಕಂ, ಶಿಷ್ಟ ರಕ್ಷಕಂ' ಎಂಬುದು ನಮ್ಮ ತತ್ವ. ಸಾವಿರಾರು ಸೂಚನೆಗಳು ಪ್ರಶ್ನೆಗಳು ಬರುತ್ತವೆ ತಮ್ಮದೇನಾದರೂ ಇದ್ದರೆ ಕನ್‌ವಿನ್ಸ್ ಮಾಡಬೇಕು. ರಾಜಕಾರಣ ಸರ್ಕಾರದಲ್ಲಿ ಯಾರೂ ಮಾಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಹೇಳಲಂತೂ ಆ ಪ್ರಶ್ನೆ ಬರುವುದಿಲ್ಲ.

ಅಧ್ಯಕ್ಷರು.—ಕ್ರಿಮಿನಲ್ ವಿಚಾರಣೆ ಮಾಡುವುದಿದ್ದರೆ ಕನ್ವೆಂಡ್ ಮಾಡುತ್ತಾರೆ. ಹೇಗೆ ವಕೀಲರೆ.

ಒಬ್ಬ ಮಾನ್ಯ ಸದಸ್ಯರು —ಅವರು ವಕೀಲರೆ?

ಅಧ್ಯಕ್ಷರು.—ವಕೀಲರು ಎಂದುಹೇಳಿದರೆ ತಪ್ಪಿಲ್ಲ. ಮೊದಲು ವಕೀಲರಾಗಿಯೇ ಇದ್ದರು ಅವರು ನಂತರ ಮಂತ್ರಿಗಳಾದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಸರಿಯಾದ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು.—ತಪ್ಪು ಮಾಡಿದ್ದರೆ ನಾನೇ ಹೇಳುತ್ತೇನೆ ಸಸ್ಪೆಂಡ್ ಮಾಡಿ ಎಂದು.

ವಿತ್ತೀಯ ಕಾರ್ಯಕಲಾಪಗಳು

1985-86ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಅಭಿಸೂಚನೆ ಕ್ರಮಾಂಕ 4 – ಮೀನುಗಾರಿಕೆ

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರುಗಳ ಮಂತ್ರಿ),—

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕ ಹೆಚ್ಚುವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೪೯,೧೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೨೦,೭೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 47-ರೇವು ಮತ್ತು ಜಲಸಾರಿಗೆ ಸೇವೆಗಳು

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಹೆಚ್ಚುವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೪೪,೫೭,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫, ೪೮, ೫೦, ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವನ್ನು ಮಂಡಿಸಲಾಗಿದೆ.

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿ).—

ಅಭಿಯಾಚನೆ ಕ್ರಮಾಂಕ : 22—ಅರಣ್ಯ

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಹೆಚ್ಚುವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೪,೮೨,೮೮,೦೦ ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪೦,೦೦,೦೦೦ ರೂ.ಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವನ್ನು ಪಠಿಸಲಾಗಿದೆ.

† ಶ್ರೀ ಎಸ್. ಬಂಗಾರಪ್ಪ (ಮಾನ್ಯ ವಿರೋಧಪಕ್ಷದ ನಾಯಕರು).—

ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಮಂಡಿಸಿರತಕ್ಕಂಥ ಬೇಡಿಕೆ ಸಂಖ್ಯೆ ನಂ. ೪, ೨೨ ಮತ್ತು ೪೭ನೇ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ನಿಂತಿದ್ದೇನೆ.

ಶ್ರೀ ನಾರಾಯಣರಾವ್ (ಅವರು ಅಧ್ಯಕ್ಷ ಪೀಠದಲ್ಲಿದ್ದರು).

ಇಷ್ಟೊಂದು ಮೊತ್ತದ ಹಣವನ್ನು ಸದನ ಮಂಜೂರು ಮಾಡಿಕೊಡಬೇಕು. ಏಕೆಂದರೆ ಇಲಾಖೆಯನ್ನು ಈ ವರ್ಷದಲ್ಲಿ ನಡೆಸಬೇಕು. ಮಾನ್ಯ ಬೈರೇಗೌಡರು ಮೀನುಗಾರಿಕೆ ಬಂದರು ಮತ್ತು ಜಲಸಾರಿಗೆ

† Indicates that remarks or speeches have not been revisedby the member concerned.